# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 23-03-2021 ಪ್ರಶ್ನೆ ಸಂಖ್ಯೆ : 1678(1946)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 23-03-2021

ಉತ್ತರಿಸುವ ಸಚಿವರು: ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ವಿಷಯ : ರಾಜ್ಯದಲ್ಲಿರುವ ಬಿ. ಪಿ. ಎಲ್., ಎ. ಪಿ. ಎಲ್ ಹಾಗೂ ಅಂತ್ಯೋದಯ ಪಡಿತರದಾರರ ಬಗ್ಗೆ

(ಅ) ಪ್ರಸ್ತುತ ರಾಜ್ಯದಲ್ಲಿರುವ ಬಿ.ಪಿ.ಎಲ್., ಎ.ಪಿ.ಎಲ್ ಹಾಗೂ ಅಂತ್ಯೋದಯ ಪಡಿತರ ಒಟ್ಟು ಸಂಖ್ಯೆ ಎಷ್ಟು; ಅಕ್ರಮ ಪಡಿತರ ತಡೆಯುವ ನಿಟ್ಟಿನಲ್ಲಿ ಕಳೆದ 2 ವರ್ಷಗಳಿಂದ ಡಿಸೆಂಬರ್-2020ರ ಅಂತ್ಯಕ್ಕೆ ಎಷ್ಟು ಅಕ್ರಮ ಪಡಿತರ ಕಾರ್ಡುಗಳನ್ನು ಸರ್ಕಾರ ರದ್ದುಪಡಿಸಿದೆ; (ಕಾರ್ಡುಗಳ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಜನವರಿ-2021ರ ಅಂತ್ಯಕ್ಕೆ ಒಟ್ಟು ಎಷ್ಟು ಮೆಟ್ರಿಕ್ ಟನ್ ಆಹಾರ ಧಾನ್ಯದ ಅವಶ್ಯಕತೆ ಇದೆ; ರಾಜ್ಯಕ್ಕೆ ಅವಶ್ಯಕತೆಯಿರುವ ಆಹಾರಧಾನ್ಯಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಎಷ್ಟು ಮೆಟ್ರಿಕ್ ಟನ್ ಆಹಾರ ಧಾನ್ಯ ಪೂರೈಸುತ್ತದೆ; (ಪಡಿತರ/ಆಹಾರ ಧಾನ್ಯವಾರು ಮಾಹಿತಿ ನೀಡುವುದು)

(ಇ) ಕೇಂದ್ರ ಪೂರೈಸಿರುವ ಪಡಿತರವನ್ನು ಹೊರತುಪಡಿಸಿ ರಾಜ್ಯಕ್ಕೆ ಇನ್ನು ಹೆಚ್ಚಿನ ಎಷ್ಟು ಪಡಿತರ ಅವಶ್ಯಕತೆ ಇದೆ; ಈ ಪಡಿತರವನ್ನು ಯಾವ ಯಾವ ಮೂಲಗಳಿಂದ ಯಾವ ಬೆಲೆಗೆ ಖರೀದಿಸಲಾಗುತ್ತಿದೆ; (ಪಡಿತರವಾರು ವಿವರ ನೀಡುವುದು)

(ಈ) ಕೇಂದ್ರ ಸರ್ಕಾರವು ಅಕ್ಕಿ, ಗೋಧಿ ಮತ್ತು ಸಕ್ಕರೆ ಇತರೆ ಪಡಿತರವನ್ನು ಯಾವ ಬೆಲೆಯಲ್ಲಿ ಖರೀದಿ ಮಾಡಿ ರಾಜ್ಯಕ್ಕೆ ಯಾವ ಬೆಲೆಯಲ್ಲಿ ನೀಡುತ್ತದೆ? (ಪಡಿತರವಾರು ಮಾಹಿತಿ ನೀಡುವುದು)